ಜೆ. ಎಂ. ಎಫ್. ಸಿ. II, ನ್ಯಾಯಾಲಯ, ಹುಬ್ಬಳ್ಳಿ.

ಸಿ.ಸಿ. ನಂಃ 2496/2022

PW: 01

CW: 01

ಸಾಕ್ಷಿದಾರರ ಹೆಸರು : ಗೌರಮ್ಮಾ ಮಡಿವಾಳರ

ಗಂಡನ ಹೆಸರು : ಬಸವರಾಜ

ವಯಸ್ಸು : 30 ವರ್ಷ

ಉದ್ಯೋಗ : ಶೇತ್ಕಿ

ವಾಸಸ್ಥಳ : ಉಮಚಗಿ

ಪ್ರಮಾಣ ವಚನವನ್ನು ಬೋದಿಸಲಾಯಿತು. ದಿನಾಂಕಃ 15.11.2025

**ಮುಖ್ಯ ವಿಚಾರಣೆಃ ಸ. ಸ. ಅ. ರವರಿಂದಃ**

ಈಗ್ಯ 3 ವರ್ಷದ ಹಿಂದೆ ನಾವು ಮನೆ ಕಟ್ಟಿಸುತ್ತಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಆರೋಪಿತರು ಪಂಚಾಯತಿಯಿಂದ ಸ್ಟೇ ತಂದಿದ್ದರು. ಆಗ ನಾವು 1 ನೆ ಆರೋಪಿ ಹಾಗೂ ಅತನ ಮಗ ಮುತ್ತಪ್ಪ ನಿಗೆ ಸದರಿ ಜಾಗೆ ನಮಗೆ ಪಂಚಾಯತಿಯಿಂದ ಕೊಟ್ಟಿದ್ದು, ನೀವು ಈ ರೀತಿ ಸ್ಟೇ ತಂದಿರುವುದು ಸರಿ ಅಲ್ಲ ಎಂದು ಕೇಳಿದಾಗ ವೀರನಗೌಡ ಪಾಟೀಲ, ಅವರ ಮಗ ಮುತ್ತಪ್ಪ, ಮುತ್ತಪ್ಪನ ತಾಯಿ ಶಾಂತವ್ವ ಹಾಗೂ ಮುತ್ತಪ್ಪನ ತಂಗಿ ಸೇರಿ ರಾತ್ರಿ 8.30 ರ ಸುಮಾರಿಗೆ ಮುತ್ತಪ್ಪ ನನಗೆ ಕಂದ್ಲಿಯಿಂದ ನನ್ನ ಡುಬ್ಬಕ್ಕೆ ಹೊಡೆದೆನು. ವೀರನಗೌಡ ಹಾಗೂ ಮುತ್ತಪ್ಪ ಸೇರಿ ಕಂದ್ಲಿ ಹಾಗೂ ಬಡಿಗೆಯಿಂದ ಚಾ ಸಾ 4 ಹಾಗೂ 6 ರವರಿಗೆ ಹೊಡೆದರು. ಅದರಿಂದ ನನಗೆ, ಚಾ ಸಾ 4 ಹಾಗೂ 6 ರವರಿಗೆ ರಕ್ತ ಗಾಯಗಳು ಆದವು. ಮುತ್ತಪ್ಪ ಹಾಗೂ ವೀರನಗೌಡ ನನ್ನ ಹಾಗೂ ಚಾ ಸಾ 4 ರವರ ಸೀರೆ ಹಿಡಿದು ಎಳೆದಾಡಿದರು. ಆಗ ಚಾ ಸಾ 9 ಹಾಗೂ ದೇವರೆಡ್ಡಿ ರವರು ಬಂದು ಬಿಡಿಸಿದರು. ಘಟನೆಯ ಕಾಲಕ್ಕೆ ಬಹಳ ಜನ ಸೇರಿದ್ದರು.

ನಂತರ ನಮ್ಮನ್ನು ಟಾ ಟಾ ಎ ಸಿ ವಾಹನದಲ್ಲಿ ಹುಬ್ಬಳ್ಳಿಯ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದರು. ಆಸ್ಪತ್ರೆಯಲ್ಲಿದ್ದಾಗ ಪೋಲಿಸರು ಬಂದು ದೂರನ್ನು ಪಡೆದರು. ನಾನು ಹೇಳಿದಂತೆ ಪೋಲಿಸರು ದೂರನ್ನು ಬರೆದುಕೊಂಡರು. ಸಾಕ್ಷಿಯು ದೂರನ್ನು ಹಾಗೂ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು ಹಾಗೂ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಮರು ದಿನ ಪೋಲಿಸರು ಘಟನೆ ಸ್ಥಳಕ್ಕೆ ಬಂದು ಪಂಚನಾಮೆ ಮಾಡಿದರು. ಘಟನೆ ಸ್ಥಳವನ್ನು ಪೋಲಿಸರಿಗೆ ನಾನೇ ತೋರಿಸಿದ್ದೇನೆ. ಸಾಕ್ಷಿಯು ಎರಡು ಪೊಟೋದಲ್ಲಿ ತಾನಿರುವುದಾಗಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 ಹಾಗೂ 3 ಎಂದು

ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ಒಂದು ಬಡಿಗೆ ಹಾಗೂ ಕಂದ್ಲಿ ಯನ್ನು ಪೋಲಿಸರಿಗೆ ಸಿಕ್ಕಿತ್ತು. ಅವುಗಳನ್ನು ತೆಗೆದುಕೊಂಡು ಹೋದರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಬಡಿಗೆ ಹಾಗೂ ಒಂದು ಕಬ್ಬಿಣದ ಕಂದ್ಲಿಯನ್ನು ನೋಡಿ ಗುರುತಿಸಿದ್ದಾರೆ. ಅವುಗಳನ್ನು ಮುದ್ದೆ ಮಾಲು 1 ಹಾಗೂ 2 ಎಂದು ಗುರುತಿಸಲಾಯಿತು. ನಮಗೆ ಹೊಡೆ ಬಡೆ ಮಾಡಿದರನ್ನು ನೋಡಿದರೇ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ಮುತ್ತಪ್ಪ ಎಂದು ಗುರುತಿಸಿದ್ದಾರೆ. 1, 3 ಹಾಗೂ 4 ನೇ ಆರೋಪಿತರು ಗೈರು ಹಾಜರಾಗಿದ್ದು ಅವರ ಗುರುತಿಸುವಿಕೆ ಬಗ್ಗೆ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿಗಳ ಪರ ವಕೀಲರಿಂದಃ**

ಆರೋಪಿತರ ಮನೆ ನಮ್ಮ ಮನೆಯ ಪಕ್ಕದಲ್ಲಿದೆ. ಅಂದಾಜು 15-20 ಅಡಿ ಅಂತರವಿದೆ. ಸದರಿ ಜಾಗೆಯನ್ನು ನಾವು ಮಂಜಪ್ಪ ಪಾತರ್ ರವರಿಂದ ಖರೀದಿ ಮಾಡಿದ್ದೇವೆ. ಆರೋಪಿತರು ಸಹ ಅವರಿಂದಲೇ ಜಾಗೆ ಖರೀದಿಸಿದ್ದಾರೆ. ಸದರಿ ಜಾಗೆ ಅಳತೆಗಾಗಿ ಆರೋಪಿತರು ಸರ್ವೇಯರನ್ನು ಕರೆಸಿದ್ದರು ಎಂದರೆ ನಿಜ. ಸರ್ವೇಯರವರು ನಮಗೆ ಮುಂಚಿತ ನೋಟಿಸು ನೀಡಿರಲಿಲ್ಲ. ಆಗ ಸರ್ವೇಯರವರು ನಮ್ಮ ಜಾಗೆ ಅಲ್ಲಿ ಬರುವುದಿಲ್ಲ ಬೇರೆ ಕಡೆ ಬರುತ್ತದೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಸದರಿ ಜಾಗೆಯ ಬಗ್ಗೆ ಆರೋಪಿತರು ಸಿವಿಲ್ ದಾವೆ ಹಾಕಿದ್ದಾರೆ ಎಂದರೆ ನಿಜ. ಸದರಿ ದಾವೆಯಲ್ಲಿ ನಾನು ಪಕ್ಷಗಾರಳು ಎಂದರೆ ನಿಜ.

ನಾನು ಒಟ್ಟು 4-5 ಸಹಿಗಳನ್ನು ಮಾಡಿದ್ದೇನೆ. ನಾನು ಸಹಿ ಮಾಡಿದ್ದ ದಾಖಲೆಗಳಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಅವುಗಳನ್ನು ಪೋಲಿಸರು ನಾನು ಹೇಳಿದಂತೆ ಬರೆದುಕೊಂಡಿದ್ದಾರೆ. ನಾನು ಪೋಲಿಸರು ಬರೆದುಕೊಂಡಿದ್ದ ದಾಖಲೆಗಳಿಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಹಾಗೂ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ನಾವು ಆಸ್ಪತ್ರೆಗೆ ಹೋದಾಗ ರಾತ್ರಿ 10.30 ಆಗಿತ್ತು. ಪೋಲಿಸರು ಆಸ್ಪತ್ರೆಯಲ್ಲಿ ನನ್ನ ಸಹಿಯನ್ನು ಬೆಳಿಗ್ಗೆ ಪಡೆದಿದ್ದರು. ಜಾಗೆಯ ಸರ್ವೇ ಕಾಲಕ್ಕೆ ಅಧಿಕಾರಿಗಳು ನಮ್ಮ ಜಾಗೆ ಅಲ್ಲಿ ಬರುವುದಿಲ್ಲ ಎಂದು ಹೇಳಿದಾಗ ನಾ ಬಾಯಿ ಮಾತಿನ ನ್ಯಾಯ ಮಾಡಿಕೊಂಡು ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿದ್ದೇವೆ ಎಂದರೇ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ನನಗೆ ಹಾಗೂ ಚಾ ಸಾ 4, 6 ರವರಿಗೆ ಹೊಡೆ ಬಡೆ ಮಾಡಿಲ್ಲ ಹಾಗೂ ಗಾಯ ಪಡಿಸಿಲ್ಲ ಎಂದರೆ ಸರಿಯಲ್ಲ.

ನಾವು ಮನೆ ಕಟ್ಟಲು ಆರೋಪಿತರು ತಕರಾರು ಅರ್ಜಿ ನೀಡಿದ್ದರು ಎಂದರೆ ನಿಜ. ಅದನ್ನು ಅವರು ವಾಪಸು ತೆಗೆದುಕೊಳ್ಳಬೇಕೆಂದು ಅವರ ವಿರುದ್ಧ ಸುಳ್ಳು ದೂರು ನೀಡಿದ್ದೇವೆ ಎಂದರೆ

ಸರಿಯಲ್ಲ. ಆಸ್ಪತ್ರೆಯಲ್ಲಿ ಹಾಗೂ ಪೋಲಿಸ್ ಠಾಣೆಯಲ್ಲಿ ಹೊರತುಪಡಿಸಿ ನಾನು ಪೋಲಿಸರಿಗೆ ಎಲ್ಲಿಯೂ ಭೇಟಿಯಾಗಿಲ್ಲ ಎಂದರೆ ಸಾಕ್ಷಿಯು ಮರು ದಿನ ಮನೆಯ ಬಳಿ ಬಂದಿದ್ದರು ಎಂದು ನುಡಿಯುತ್ತಾರೆ. ಮುದ್ದೆ ಮಾಲು 2 ರಂತಹ ಕಂದ್ಲಿ ಮಾರುಕಟ್ಟೆಯಲ್ಲಿ ಸಿಗುತ್ತವೆ ಎಂದರೆ ನಿಜ. ಸಾಕ್ಷಿಯು ಅವರು ಹೊಡೆದಿರುವುದನ್ನು ನಾವು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಮುದ್ದೆ ಮಾಲು 1 ರಂತಹ ಬಡಿಗೆ ಸಾಮಾನ್ಯವಾಗಿ ಎಲ್ಲಾ ಕಡೆ  ಸಿಗುತ್ತವೆ ಎಂದರೆ ನಿಜ. ಸಾಕ್ಷಿಯು ಹೊಡೆದಿರುವುದು ಅವರ ಮನೆಯ  ಬಾಗಿಲಿನಲ್ಲಿ ತೆಗೆದುಕೊಂಡಿದ್ದು ಎಂದು ನುಡಿಯುತ್ತಾರೆ. ಮುದ್ದೆ ಮಾಲು 1 ಹಾಗೂ 2 ರಿಂದ  ಆರೋಪಿತರು ನಮಗೆ ಹೊಡೆದಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನಮಗೆ ಜಾಗೆ ಮಾರಿದ್ದ ಮಾಲೀಕರು ನಮಗೆ ಜಾಗೆಯನ್ನು ಮೋಸ ಮಾಡಿ  ಮಾರಾಟ ಮಾಡಿದ್ದ ಸಿಟ್ಟಿನಿಂದ  ಆರೋಪಿತರ ವಿರುದ್ದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.  ಆರೋಪಿತರು ಸಿವಿಲ್ ದಾವೆ ಸಲ್ಲಿಸಿದ್ದ ಕಾರಣ ನಮ್ಮ ಜೊತೆ ಯಾವುದೇ ರೀತಿಯ ತಕರಾರಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ.  ನಮ್ಮ ಗ್ರಾಮದ ಬೀದಿಗಳಲ್ಲಿ ವಿದ್ಯುತ್ ದೀಪಗಳು ಇಲ್ಲ ಎಂದರೆ ನಿಜ. ಕತ್ತಲಿನಲ್ಲಿ ನಾವು ರಸ್ತೆಯಲ್ಲಿ ಚಕ್ಕಡಿ ಗಾಡಿಯಿಂದ ಆಯಾ ತಪ್ಪಿ  ಬಿದ್ದು ಗಾಯ ಪಡಿಸಿಕೂಂಡು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಮಗೆ ಸಿವಿಲ್ ದಾವೆಯಲ್ಲಿ ಪರಿಹಾರ ಸಿಗುವುದಿಲ್ಲ ಎಂದು ಗೊತ್ತಾಗಿ ನಾವು ಚಕ್ಕಡಿಯಿಂದ ಆಯ ತಪ್ಪಿ ಬಿದ್ದು  ಗಾಯ ಪಡಿಸಿಕೊಂಡಿರುವುದನ್ನು ದುರುಪಯೋಗ ಪಡಿಸಿಕೊಂಡು ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು 1 ಹಾಗೂ 2 ನಿಪಿ-3 ರಲ್ಲಿರುವ ಮುದ್ದೆ ಮಾಲುಗಳಲ್ಲ ಎಂದರೆ ಸರಿಯಲ್ಲ.  ಮುದ್ದೆ ಮಾಲು 1 ಹಾಗೂ 2 ಹಾಗೂ ನಿಪಿ-3 ರಲ್ಲಿರುವ ಮುದ್ದೆ ಮಾಲುಗಳು ಬೇರೆ ಬೇರೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ .ಹೇ .ಕೇ ಸರಿ ಇದೆ.

Sd/-

ಜೆ. ಎಮ್. ಎಫ್. ಸಿ. -II, ಹುಬ್ಬಳ್ಳಿ.

ಜೆ. ಎಂ. ಎಫ್. ಸಿ. II, ನ್ಯಾಯಾಲಯ, ಹುಬ್ಬಳ್ಳಿ.
ಸಿ.ಸಿ. ನಂಃ 2496/2022

PW: 02
CW: 04

| | |
|---|---|
| ಸಾಕ್ಷಿದಾರರ ಹೆಸರು | : ಅನ್ನಪೂರ್ಣಾ ಮಡಿವಾಳರ |
| ಗಂಡನ ಹೆಸರು | : ಬಸವರಾಜ |
| ವಯಸ್ಸು | : 38 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸಸ್ಥಳ | : ಉಮಚಗಿ |

ಪ್ರಮಾಣ ವಚನವನ್ನು ಬೋದಿಸಲಾಯಿತು. ದಿನಾಂಕಃ 15.11.2025

**ಮುಖ್ಯ ವಿಚಾರಣೆಃ ಸ. ಸ. ಅ. ರವರಿಂದಃ**

ಮಾರ್ಚ 2022 ರಂದು ರಾತ್ರಿ 8.00 ಗಂಟೆ ಸುಮಾರಿಗೆ ನಾವು ಜಾಗೆಯ ಸ್ಟೇ ತಗಿಸುವಂತೆ ಕೇಳಲು ವೀರನಗೌಡರವರಿಗೆ ಮನೆಗೆ ಹೋಗಿದ್ದೆವು. ನಾವು ಸ್ಟೇ ತಗಿಸುವಂತೆ ಕೇಳಿದಾಗ ಅವರು ಸ್ಟೇ ತಗಿಸಲು ಕೇಳಲು ಬರುತ್ತೀರಾ, ನಾವು ತೆಗೆಸುವುದಿಲ್ಲ ಏನು ಮಾಡುತ್ತಿರಿ ಮಾಡಿಕೊಳ್ಳಿ ಎಂದು ಕಂದ್ಲಿಯಿಂದ ವೀರನಗೌಡರ ರವರ ಮಗ ಮುತ್ತಪ್ಪ ರವರು ನನಗೆ ತಲೆಗೆ ಹೊಡೆದರು. ಅದರಿಂದ ನನಗೆ ಪ್ರಜ್ಞೆ ತಪ್ಪಿತ್ತು. ನನಗೆ ನೀರು ಹಾಕಿದಾಗ ಎಚ್ಚರವಾಯಿತು. ನಂತರ ಚಾ ಸಾ 7 ರವರು ಚಾ ಸಾ 1, 5 ಹಾಗೂ 6 ರವರನ್ನು ನನ್ನನ್ನು ಸೇರಿಸಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಟಾ ಟಾ ಎ ಸಿ ವಾಹನದಲ್ಲಿ ಕರೆದುಕೊಂಡು ಹೋದರು. ಆಸ್ಪತ್ರೆಗೆ ರಾತ್ರಿ ಹೋಗಿ ಬೆಳಿಗ್ಗೆ ವಾಪಸು ಮನೆಗೆ ಬಂದೆವು. ಆಸ್ಪತ್ರೆಯಲ್ಲಿ ನನಗೆ ಗಾಯಕ್ಕೆ ಹೊಲಿಗೆ ಹಾಕಿದರು. ಪೋಲಿಸರು ನನ್ನನ್ನು ವಿಚಾರಣೆ ಮಾಡಿಲ್ಲ. ಕಂದ್ಲಿ ನೋಡಿದರೇ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು 2 ನ್ನು ನೋಡಿ ಗುರುತಿಸಿದ್ದಾರೆ.

**ಪಾಟೀ ಸವಾಲು: ಆರೋಪಿಗಳ ಪರ ವಕೀಲರಿಂದಃ**

ಆರೋಪಿತರು ಹಾಗೂ ನಮ್ಮ ನಡುವೆ ಸಿವಿಲ್ ದಾವೆ ಇತ್ತು ಎಂದರೆ ನಿಜ. ಅದರಲ್ಲಿ ಅವರು ತಡೆಯಾಜ್ಞೆ ಪಡೆದಿದ್ದರು ಎಂದರೆ ನಿಜ. ಸದರಿ ದಾವೆಯಲ್ಲಿ ನಾನು ಸಹ ಪಕ್ಷಗಾರಳು ಎಂದರೆ ನಿಜ. ಆರೋಪಿತರು ಸಿವಿಲ್ ದಾವೆ ಹಾಕಿದ್ದ ಕಾರಣ ಸ್ಟೇ ತಗಿಸುವಂತೆ ಅವರ ಮನೆಗೆ ಹೋಗಿ ಕೇಳುವ ಪ್ರಶ್ನೆ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಗ್ರಾಮದ ಬೀದಿಗಳಲ್ಲಿ ವಿದ್ಯುತ್ ದೀಪಗಳು ಇಲ್ಲ ಎಂದರೆ ನಿಜ. ಕತ್ತಲಿನಲ್ಲಿ ನಾವು ರಸ್ತೆಯಲ್ಲಿ ಚಕ್ಕಡಿ ಗಾಡಿಯಿಂದ ಆಯಾ ತಪ್ಪಿ

ಬಿದ್ದು ಗಾಯ ಪಡಿಸಿಕೊಂಡು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಕಿಮ್ಸ ಆಸ್ಪತ್ರೆಯಲ್ಲಿ ದಿನದ 24 ಗಂಟೆ ಪೋಲಿಸರು ಇರುತ್ತಾರೆ ಎಂದರ ನಿಜ.

ನಾವು ಸ್ಟೇ ತಗಿಸುವಂತೆ ಕೇಳಿದಾಗ ಆರೋಪಿತರು ಸ್ಟೇ ತಗಿಸಲು ಕೇಳಲು ಬರುತ್ತೀರಾ, ನಾವು ತೆಗೆಸುವುದಿಲ್ಲ ಏನು ಮಾಡುತ್ತಿರಿ ಮಾಡಿಕೊಳ್ಳಿ ಎಂದು ಕಂದ್ಲಿಯಿಂದ ವೀರನಗೌಡರ ರವರ ಮಗ ಮುತ್ತಪ್ಪ ರವರು ನನಗೆ ತಲೆಗೆ ಹೊಡೆದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಿಂದ ನನಗೆ ಪ್ರಜ್ಞೆ ತಪ್ಪಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನೀರು ಹಾಕಿದಾಗ ಎಚ್ಚರವಾಯಿತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಚಾ ಸಾ 7 ರವರು ಚಾ ಸಾ 1, 5 ಹಾಗೂ 6 ರವರನ್ನು ನನ್ನನ್ನು ಸೇರಿಸಿ ಟಾ ಟಾ ಎ ಸಿ ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು 2 ನ್ನು ಇವತ್ತೆ ಮೊದಲ ಸಲ ನೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು 2 ರಂತಹ ವಸ್ತುಗಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ನಮಗೆ ಸಿವಿಲ್ ದಾವೆಯಲ್ಲಿ ಪರಿಹಾರ ಸಿಗುವುದಿಲ್ಲ ಎಂದು ಗೊತ್ತಾಗಿ ನಾವು ಚಕ್ಕಡಿಯಿಂದ ಆಯ ತಪ್ಪಿ ಬಿದ್ದು ಗಾಯ ಪಡಿಸಿಕೊಂಡಿರುವುದನ್ನು ದುರುಪಯೋಗ ಪಡಿಸಿಕೊಂಡು ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ .ಹೇ .ಕೇ ಸರಿ ಇದೆ.

Sd/-

ಜೆ. ಎಮ್. ಎಫ್. ಸಿ. -II, ಹುಬ್ಬಳ್ಳಿ.

ಜೆ. ಎಂ. ಎಫ್. ಸಿ. II, ನ್ಯಾಯಾಲಯ, ಹುಬ್ಬಳ್ಳಿ.

ಸಿ.ಸಿ. ನಂಃ 2496/2022

PW: 03

CW: 06

| | |
|---|---|
| ಸಾಕ್ಷಿದಾರರ ಹೆಸರು | : ಬಸವರಾಜ ಮಾಡಿವಾಳರ |
| ತಂದೆಯ ಹೆಸರು | : ರಾಮಪ್ಪ |
| ವಯಸ್ಸು | : 38 ವರ್ಷ |
| ಉದ್ಯೋಗ | : ಶೇತ್ಕಿ |
| ವಾಸಸ್ಥಳ | : ಉಮಚಗಿ |

ಪ್ರಮಾಣ ವಚನವನ್ನು ಬೋದಿಸಲಾಯಿತು. ದಿನಾಂಕಃ 15.11.2025

**ಮುಖ್ಯ ವಿಚಾರಣೆಃ ಸ. ಸ. ಅ. ರವರಿಂದಃ**

ಈಗ್ಯ 3 ವರ್ಷದ ಹಿಂದೆ ರಾತ್ರಿ 7.30 ರ ಸುಮಾರಿಗೆ ನಾನು ಟಾ ಟಾ ಎ ಸಿ ವಾಹನ ತೆಗೆದುಕೊಂಡು ಊರಿಗೆ ಬಂದಾಗ ಚಾ ಸಾ 1 ರವರು ನನಗೆ ಫೋನ್ ಮಾಡಿ ಜಾಗೆಯ ಸಂಬಂಧ ಆರೋಪಿತರು ಹಾಗೂ ಚಾ ಸಾ 1 ಹಾಗೂ 4 ರವರಿಗೆ ಜಗಳವಾಗುತ್ತಿರುವುದಾಗಿ ತಿಳಿಸಿದರು. ನಾನು ಕೂಡಲೇ ಮನೆಗೆ ಹೋಗಿ ಜಗಳದ ಕಾರಣವನ್ನು ಕೇಳಲಾಗಿ ಜಾಗೆಯ ಸಂಬಂಧ ಎಂದು ತಿಳಿಸಿದರು. ಆಗ ನಾವು ಸುಮ್ಮನೇ ಜಗಳ ಮಾಡುವುದು ಬೇಡವೆಂದು ಅಳತೆ ಮಾಡಿಸಲು ಹಿರಿಯರನ್ನು ಕೇಳುವುದೆಂದು ನಿರ್ಧರಿಸಿ ಪಂಚಾಯತಿ ಅಧ್ಯಕ್ಷರನ್ನು ಅವರು ನಾಳೇ ಮಾಡಿಸೋಣ ಎಂದು ಹೇಳಿದರು.

ಬೆಳಿಗ್ಗೆ ನಮ್ಮ ಹಾಗೂ ಆರೋಪಿತರ ಜಾಗೆಗಳನ್ನು ಅಳತೆ ಮಾಡಿ ಕಲ್ಲನ್ನು ಹಾಕಿದರು. ಆದರೂ ಸಹ ಆರೋಪಿತರು ಸದರಿ ಪಂಚಾಯತಿಯನ್ನು ಒಪ್ಪಿರಲಿಲ್ಲ. ನಾನು ಹಿರಿಯರ ಮಾತಿನಂತೆ ಆರೋಪಿತರ ಜಾಗೆದ ಕಡೆಗೆ 5 ಅಡಿ ಜಾಗೆಯನ್ನು ಬಿಟ್ಟು ಕಟ್ಟಿಕೊಳ್ಳುತ್ತಿದ್ದೆ. ಅದಕ್ಕೆ ಆರೋಪಿತರು ಪಂಚಾಯತಿಯಿಂದ ಸ್ಟೇ ತಂದರು. 2 ದಿನಗಳ ನಂತರ ಆರೋಪಿತರು ಸದರಿ ಜಾಗೆದಲ್ಲಿ ಬಂದು ಜಗಳ ತೆಗೆದು ನ್ಯಾಯಾಲಯದ ಮುಂದಿರುವ 2 ನೇ ಆರೊಪಿ ಕಂದ್ಲಿಯಿಂದ ನನ್ನ ಬಲ ಭುಜಕ್ಕೆ ಹೊಡೆದರು. ಅದೇ ರೀತಿ ಚಾ ಸಾ 1 ರವರಿಗೆ ಕಂದ್ಲಿಯಿಂದ ಬೆನ್ನಿನ ಬಲ ಡುಬ್ಬಕ್ಕೆ ಹೊಡೆದರು. ಚಾ ಸಾ 4 ರವರಿಗೆ ಹಣೆ ಮೇಲೆ ಹೊಡೆದರು. ವೀರನಗೌಡ ಬಡಿಗೆಯಿಂದ ಚಾ ಸಾ 4 ರವರಿಗೆ ಕೈಗೆ ಹೊಡೆದರು. ನಾನು ಬಿಡಿಸಲು ಹೋದಾಗ 2 ನೇ ಆರೊಪಿ ಕಂದ್ಲಿಯಿಂದ ನನ್ನ ತಲೆಗೆ ಹೊಡೆದನು.

ನಾನು ಪ್ರಜ್ಞೆ ತಪ್ಪಿ ಬಿದ್ದೆನು. ಆರ್ಧ ಗಂಟೆಯ ನಂತರ ನನಗೆ ಎಚ್ಚರವಾಗಿದ್ದು ಆರೋಪಿತರು ಅಲ್ಲಿ ಇರಲಿಲ್ಲ. ಜಗಳವನ್ನು ಚಾ ಸಾ 8 ಹಾಗೂ ದೇವರೆಡ್ಡಿ ಎನ್ನುವವರು ಬಿಡಿಸಿದರು. ನಂತರ ನಾವು ಟಾ ಟಾ ಎ ಸಿ ವಾಹನದಲ್ಲಿ ಕಿಮ್ಸ ಆಸ್ಪತ್ರೆಗೆ ಹೋದೆವು. ಬೆಳಿಗ್ಗೆ ಪೋಲಿಸರು ಬಂದು ಬರೆದುಕೊಂಡರು. ಬಡಿಗೆ ಹಾಗೂ ಕಂದ್ಲಿ ನೋಡಿದರೇ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು 1 ಹಾಗೂ 2 ನ್ನು ನೋಡಿ ಗುರುತಿಸಿದ್ದಾರೆ. ಆಸ್ಪತ್ರೆಗೆ ನಮ್ಮನ್ನು ಹಸನ್ ಎನ್ನುವ ಹುಡುಗ ನನ್ನ ಟಾ ಟಾ ಎ ಸಿ ವಾಹನದಲ್ಲಿ ಕರೆದುಕೊಂಡು ಬಂದಿದ್ದನು.

**ಪಾಟೀ ಸವಾಲು: ಆರೋಪಿಗಳ ಪರ ವಕೀಲರಿಂದಃ**

ನಾನು ಟಾ ಟಾ ಎ ಸಿ ನಡೆಸಲು ಹೋದರೆ ರಾತ್ರಿಯೇ ಮರಳಿ ಬರುವುದು ಎಂದರೇ ಸಾಕ್ಷಿಯು ಕೆಲವೊಮ್ಮೆ 4 ಗಂಟೆ, ಕೆಲವೊಮ್ಮೆ 5 ಗಂಟೆಗೆ ಹಾಗೂ 7.ಗಂಟೆಗೆ ಬರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿತರು ನನ್ನ ವಿರುದ್ದ ಸಿವಿಲ್ ದಾವೆ ಸಲ್ಲಿಸಿದ್ದಾರೆ ಎಂದರೆ ನಿಜ. ನ್ಯಾಯಾಲಯದಿಂದ ಸ್ಟೇ ಇದ್ದಾಗ ನಾವು ಕಟ್ಟಡ ಮುಂದುವರೆಸಿದ್ದವು ಎಂದರೆ ಸರಿಯಲ್ಲ. ನಾವು ಹಾಗೂ ಆರೊಪಿತರು ಖರೀದಿಸಿದ ಜಾಗೆಗಳನ್ನು ಹೊಲದ ಮಾಲೀಕರು ಹಾಗೂ ಊರ ಹಿರಿಯರು ಅಳತೆ ಮಾಡಿ ಕಲ್ಲು ಹಾಕಿ ಕೊಟ್ಟಿದ್ದರು. ಆರೊಪಿತರು ತಡೆಯಾಜ್ಞೆ ತಂದಿದ್ದ ಕಾರಣ ನಾವು ಅವರ ವಿರುದ್ದ ದ್ವೇಷದಿಂದ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ಕತ್ತಲಿನಲ್ಲಿ ನಾವು ರಸ್ತೆಯಲ್ಲಿ ಚಕ್ಕಡಿ ಗಾಡಿಯಿಂದ ಆಯಾ ತಪ್ಪಿ ಬಿದ್ದು ಗಾಯ ಪಡಿಸಿಕೊಂಡು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಆರೋಪಿತರು ಸದರಿ ಜಾಗೆದಲ್ಲಿ ಬಂದು ಜಗಳ ತೆಗೆದು ನ್ಯಾಯಾಲಯದ ಮುಂದಿರುವ 2 ನೇ ಆರೊಪಿ ಕಂದ್ಲಿಯಿಂದ ನನ್ನ ಬಲ ಭುಜಕ್ಕೆ ಹೊಡೆದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಚಾ ಸಾ 1 ರವರಿಗೆ ಕಂದ್ಲಿಯಿಂದ ಬೆನ್ನಿನ ಬಲ ಡುಬ್ಬಕ್ಕೆ ಹೊಡೆದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ ಸಾ 4 ರವರಿಗೆ ಹಣೆ ಮೇಲೆ ಹೊಡೆದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವೀರನಗೌಡ ಬಡಿಗೆಯಿಂದ ಚಾ ಸಾ 4 ರವರಿಗೆ ಕೈಗೆ ಹೊಡೆದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಿಡಿಸಲು ಹೋದಾಗ 2 ನೇ ಆರೊಪಿ ಕಂದ್ಲಿಯಿಂದ ನನ್ನ ತಲೆಗೆ ಹೊಡೆದನು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಪ್ರಜ್ಞೆ ತಪ್ಪಿ ಬಿದ್ದು ಎಚ್ಚರವಾದಾಗ ಆರೋಪಿತರು ಅಲ್ಲಿ ಇರಲಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಗಳವನ್ನು ಚಾ ಸಾ 8 ಹಾಗೂ ದೇವರೆಡ್ಡಿ ಎನ್ನುವವರು ಬಿಡಿಸಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ

ನಾವು ಟಾ ಟಾ ಎ ಸಿ ವಾಹನದಲ್ಲಿ ಕಿಮ್ಸ ಆಸ್ಪತ್ರೆಗೆ ಹೋಗಿದ್ದು ಬೆಳಿಗ್ಗೆ ಪೋಲಿಸರು ಬಂದು ಬರೆದುಕೊಂಡರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಗೆ ನಮ್ಮನ್ನು ಹಸನ್ ಎನ್ನುವ ಹುಡುಗ ನನ್ನ ಟಾ ಟಾ ಎ ಸಿ ವಾಹನದಲ್ಲಿ ಕರೆದುಕೊಂಡು ಬಂದಿದ್ದನು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ಹಾಗೂ 2 ರಂತಹ ವಸ್ತುಗಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ನಿಜ. ಆರೋಪಿತರು ಮುದ್ದೆ ಮಾಲುಗಳಿಂದ ಹೊಡೆದಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಕಂದ್ಲಿ ನನ್ನದೇ ಇದ್ದು ಆರೋಪಿತರರು ಅದರಿಂದ ಹೊಡೆದಿದ್ದರು ಎಂದು ನುಡಿಯುತ್ತಾರೆ. ಮುದ್ದೆ ಮಾಲು 1 ಹಾಗೂ 2 ಗಳನ್ನು ನಾನು ಇವತ್ತೆ ಮೊದಲ ಸಲ ನೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಸಿವಿಲ್ ದಾವೆಯಲ್ಲಿ ಪರಿಹಾರ ಸಿಗುವುದಿಲ್ಲ ಎಂದು ಗೊತ್ತಾಗಿ ನಾವು ಚಕ್ಕಡಿಯಿಂದ ಆಯ ತಪ್ಪಿ ಬಿದ್ದು ಗಾಯ ಪಡಿಸಿಕೊಂಡಿರುವುದನ್ನು ದುರುಪಯೋಗ ಪಡಿಸಿಕೊಂಡು ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ .ಹೇ .ಕೇ ಸರಿ ಇದೆ.

SD/-

ಜೆ. ಎಮ್. ಎಫ್. ಸಿ. -II, ಹುಬ್ಬಳ್ಳಿ.